## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 282(345) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | 18.07.2024 |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ | ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವುದು ನಿಜವೇ; | ಬ್ಯಾಂಕುಗಳಲ್ಲಿ ವಾರಸುದಾರರು ಇಲ್ಲದ ಠೇವಣಿ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವುದು ನಿಜವಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ. |
| ಆ | ಹಾಗಿದ್ದಲ್ಲಿ, ರಾಜ್ಯ ಸರ್ಕಾರದ ಇಲಾಖೆಗಳು ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದೇ ಇರುವ ಠೇವಣಿಗಳ ಒಟ್ಟು ಮೊತ್ತ ಎಷ್ಟು; (ಖಾತೆಗಳ ಒಟ್ಟು ಸಂಖ್ಯೆಯೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು) | ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದ ಠೇವಣಿಗಳ ಬಗ್ಗೆ ರಾಜ್ಯವಾರು/ಜಿಲ್ಲಾವಾರು ಮಾಹಿತಿಯನ್ನು ನಿರ್ವಹಣೆ ಮಾಡುವುದಿಲ್ಲವೆಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿರುತ್ತದೆ. ಆದಾಗ್ಯೂ, ಮಾರ್ಚ್ 31 2024 ರ ಅಂತ್ಯಕ್ಕೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದ ಠೇವಣಿಗಳ ಬಾಕಿ (ರಾಜ್ಯ ಸರ್ಕಾರದ ಖಾತೆಗಳನ್ನು ಒಳಗೊಂಡಂತೆ) ವಿವರಗಳು ಈ ಕೆಳಗಿನಂತಿದೆ:<br>(ಮೊತ್ತ ಕೋಟಿ ರೂಗಳಲ್ಲಿ)<br><br>ಕ್ಲೈಮ್ ಮಾಡದ ಠೇವಣಿಗಳು ದಿನಾಂಕ: 31.03.2024ರ ಅಂತ್ಯಕ್ಕೆ —<br>ಸಾರ್ವಜನಿಕ ವಲಯದ ಬ್ಯಾಂಕುಗಳು: 45,140.78<br>ಖಾಸಗಿ ವಲಯದ ಬ್ಯಾಂಕುಗಳು: 7,033.82<br><br>ಈ ಹಿಂದೆ ಭಾರತ ಸರ್ಕಾರದ ವಿತ್ತೀಯ ಸೇವಾ ವಿಭಾಗ, ಹಣಕಾಸು ಮಂತ್ರಾಲಯದ ಕಾರ್ಯದರ್ಶಿಗಳು ಇವರ D.O.No:7/5/2024-BOA-I, ದಿನಾಂಕ:20.02.2024 ರಲ್ಲಿ ನೀಡಿರುವ ಮಾಹಿತಿಯಂತೆ, ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದೆ ಇರುವ ಠೇವಣಿಗಳು 3305 ಖಾತೆಗಳಲ್ಲಿ ರೂ. 52.78 ಕೋಟಿಗಳಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |

Inner table from answer ಆ:

| | ಕ್ಲೈಮ್ ಮಾಡದ ಠೇವಣಿಗಳು ದಿನಾಂಕ: 31.03.2024ರ ಅಂತ್ಯಕ್ಕೆ |
|---|---|
| ಸಾರ್ವಜನಿಕ ವಲಯದ ಬ್ಯಾಂಕುಗಳು | 45,140.78 |
| ಖಾಸಗಿ ವಲಯದ ಬ್ಯಾಂಕುಗಳು | 7,033.82 |

| | | |
|---|---|---|
| ಇ | ಕಳೆದ 02 ವರ್ಷಗಳಲ್ಲಿ ಕ್ಲೈಮ್ ಮಾಡದ ಮೊತ್ತ ಎಷ್ಟು ಏರಿಕೆ ಆಗಿದೆ (ವರ್ಷವಾರು, ಶೇಕಡವಾರು ಮಾಹಿತಿ ನೀಡುವುದು) | ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಮಾಹಿತಿ ಈ ಕೆಳಕಂಡಂತಿದೆ:<br><table><tr><td>ಆರ್ಥಿಕ ವರ್ಷ</td><td>ಕ್ಲೈಮ್ ಮಾಡದ ಠೇವಣಿಗಳು ಮಾರ್ಚ್ 31 ರ ಅಂತ್ಯಕ್ಕೆ</td><td>ಶೇಕಡಾವಾರು ಏರಿಕೆ</td></tr><tr><td>2021-22</td><td>37,804.51</td><td>-</td></tr><tr><td>2022-23</td><td>48,461.44</td><td>28.19%</td></tr><tr><td>2023-24</td><td>60,610.10</td><td>25.07%</td></tr></table> |
| ಈ | ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವ ನೈಜ ಹಕ್ಕುದಾರರನ್ನು ಗುರುತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಹಾಗೂ ಕ್ಲೈಮ್ ಮಾಡದ ಠೇವಣಿಗಳನ್ನು ಹುಡುಕಲು ಸಾರ್ವಜನಿಕರಿಗೆ ಯಾವ ರೀತಿಯ ಅನುಕೂಲ ಮಾಡಿಕೊಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಹಲವಾರು ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದ ಠೇವಣಿಗಳನ್ನು ಒಂದೇ ಸ್ಥಳದಲ್ಲಿ ಹುಡುಕಲು ಸುಲಭವಾಗುವಂತೆ ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರೀಕೃತ ವೆಬ್ ಪೋರ್ಟಲ್ UDGAM (Unclaimed Deposits - Gateway to Access InforMation) ಅನ್ನು ಸಾರ್ವಜನಿಕ ಬಳಕೆಗಾಗಿ ರೂಪಿಸಿದೆ (ಮಾಹಿತಿಯನ್ನು ಅನುಬಂಧ -2 ರಲ್ಲಿ ಲಗತ್ತಿಸಿದೆ).<br>ಕ್ಲೈಮ್ ಮಾಡದ ಠೇವಣಿ/ಕಾರ್ಯನಿರ್ವಹಣೆಯಿಲ್ಲದ ಖಾತೆಗಳ ಪಟ್ಟಿಯನ್ನು ಹತ್ತು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ನಿಷ್ಕ್ರಿಯ/ನಿಷ್ಕ್ರಿಯಗೊಳಿಸಿದ ಪಟ್ಟಿಯನ್ನು ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರದರ್ಶಿಸಲು ಮತ್ತು ನವೀಕರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲಾ ಬ್ಯಾಂಕ್‌ಗಳಿಗೆ ಸಲಹೆ ನೀಡಿದೆ.<br>DEAF ಯೋಜನೆ ಬಗ್ಗೆ ಮತ್ತು UDGAM ಪೋರ್ಟಲ್‌ನಲ್ಲಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) RBI ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.<br>ಖಾತೆಗಳನ್ನು ಮರುಸಕ್ರಿಯಗೊಳಿಸಲು, ಖಾತೆಗಳನ್ನು ಮುಕ್ತಾಯ ಗೊಳಿಸುವ ಕ್ಲೈಮ್‌ಗಳ ಇತ್ಯರ್ಥಕ್ಕಾಗಿ ಅವರ ನಾಮನಿರ್ದೇಶನ/ ಕಾನೂನು ಉತ್ತರಾಧಿಕಾರಿಗಳು ಸೇರಿದಂತೆ ನಿಷ್ಕ್ರಿಯ ಖಾತೆಗಳು/ಕ್ಲೈಮ್ ಮಾಡದಠೇವಣಿಗಳ ಗ್ರಾಹಕರನ್ನು ಪತ್ತೆ ಹಚ್ಚಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್ ಜನವರಿ 01 2024 ರಂದು ಪರಿಷ್ಕೃತ ಸೂಚನೆಗಳನ್ನು ನೀಡಿದೆ. (ಮಾರ್ಗಸೂಚಿಗಳನ್ನು ಅನುಬಂಧ - 3 ರಲ್ಲಿ ಲಗತ್ತಿಸಿದೆ). |
| ಉ | ವಾರಸುದಾರರನ್ನು ಗುರುತಿಸಲು ಸಾಧ್ಯವಾಗದಿದ್ದಲ್ಲಿ ಈ ಠೇವಣಿ ಮೊತ್ತವನ್ನು ಏನು ಮಾಡಲಾಗುತ್ತದೆ? | ವಾರಸುದಾರರನ್ನು ಗುರುತಿಸಲು ಸಾಧ್ಯವಾಗದಿದ್ದಲ್ಲಿ, ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ ಯೋಜನೆ 2014 ರ ಕಲಂ 9 ಮತ್ತು ಕಲಂ 11 ರಲ್ಲಿ ಅವಕಾಶ ಕಲ್ಪಿಸಿದಂತೆ, ಈ ಹಣವನ್ನು ಠೇವಣಿದಾರರಿಗೆ ಜಾಗೃತಿಯನ್ನು ಮೂಡಿಸಲು ಬಳಸಲಾಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಮಾಹಿತಿ ನೀಡಿದೆ. |

ಸಂಖ್ಯೆ: ಎಫ್‌ಡಿ-ಸಿಎಎಂ/59/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ